**OS No. 118/2024**
**DW-1**

**ದಿನಾಂಕಃ 26-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ : Sri. PMB ವಾದಿ ಪರ ವಕೀಲರಿಂದ**

ನಾನು ಸಲ್ಲಿಸಿದ ಸಾಕ್ಷ್ಯ ಸ್ವರೂಪದ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಯಿಸಿದ್ದು ಅದರಲ್ಲಿ ಬರೆದ ಅಂಶಗಳು ನಿಜ ಇವೆ ಹಾಗೂ ಅದನ್ನು ಓದಿ ತಿಳಿದುಕೊಂಡು ನಾನು ಸಹಿ ಮಾಡಿರುತ್ತೇನೆ.

ನಾನು ಈ ಪ್ರಕರಣದಲ್ಲಿ ಹಾಜರ ಪಡಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ತಾನು ಹಾಜರ ಪಡಿಸಿರುವ ದಾಖಲೆಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈ ಕೆಳಗಿನಂತೆ ನಿಶಾನೆಗಳಾಗಿ ಗುರುತಿಸಲಾಯಿತು.

| | |
|---|---|
| ನಿ.ಡಿ. 1 | ಸರ್ವೆ ನಂ. 607/4 ರ ಉತಾರೆ |
| ನಿ.ಡಿ. 2 | ಡ ನಂ.10061 ರ ದೃಢೀಕೃತ ಪ್ರತಿ |
| ನಿ.ಡಿ. 3 | ಡ ನಂ.425 ದೃಢೀಕೃತ ಪ್ರತಿ |

**ಪಾಟೀ ಸವಾಲು ಶ್ರೀಮತಿ. ಬಿ ಜಿ ಎಮ್ ವಕೀಲರಿಂದ**

ದಾವಾ ಆಸ್ತಿಗಳು ನಮ್ಮ ಹಿರಿಯ ಆಸ್ತಿಗಳು ಎಂದರೆ ಸರಿ . ದಾವಾ ಆಸ್ತಿಗಳನ್ನು ನಾನು, ವಾದಿ ಪ್ರತಿವಾದಿ ನಂ.2 ರಿಂದ 5 ರವರು ಸೇರಿ ಕಬ್ಜೆ ವಹಿವಾಟಿಯನ್ನು ಮಾಡುತ್ತೇವೆ ಎಂದರೆ ಸರಿ. ನನ್ನ ಗಂಡ ಮರಣ ಹೊಂದಿ ಸುಮಾರು 25 ವರ್ಷಗಳು ಆಗಿವೆ

ಎಂದರೆ ಸರಿ. ಪ್ರತಿವಾದಿ ನಂ. 2 ರಿಂದ 4 ರವರ ಮದುವೆಯನ್ನು ನನ್ನ ಗಂಡನ ಮರಣದ ನಂತರ ನಾನೇ ಮಾಡಿದ್ದೇನೆ. ದಾವಾ ಮನೆಯ ಆಸ್ತಿಯ ಕಿಮ್ಮತ್ತು ಸುಮಾರು 50 ಲಕ್ಷ ಇರುತ್ತದೆ. ಮನೆಯನ್ನು ಮಾರಾಟ ಮಾಡುವಾಗ ನಾನು ಪ್ರತಿವಾದಿ ನಂ. 2 ರಿಂದ 4 ರವರು ಸಹಿಯನ್ನು ಕೊಟ್ಟಿರುವುದಿಲ್ಲ. ದಾವಾ ಮನೆಯನ್ನು ಮಾರಾಟ ಮಾಡಿ, ಅದರ ಮಾರಾಟ ಪ್ರತಿಫಲವನ್ನು ಪ್ರತಿವಾದಿ ನಂ.5 ರವರೆ ತೆಗೆದುಕೊಂಡಿದ್ದಾರೆ. ಸದರಿ ಮನೆಯಲ್ಲಿ ಪ್ರತಿವಾದಿ ನಂ.6 ರವರು ಈಗ ವಾಸವಾಗಿದ್ದಾರೆ. ಸದರಿ ಮನೆಯು ಮಾರಾಟ ಆಗಿರುವ ವಿಷಯ ನನಗೆ ಗೊತ್ತಿರಲಿಲ್ಲ. ಮಾರಾಟ ಆದ ಬಗ್ಗೆ ದೇವರ ಹಿಪ್ಪರಗಿ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ. ದಾವಾ ಆಸ್ತಿಗಳಲ್ಲಿ ನನಗೆ ಪ್ರತಿವಾದಿ ನಂ.2 ರಿಂದ 5 ಮತ್ತು ವಾದಿಗೆ ಸಮನಾದ ಪಾಲು ವಾದಿಗೆ ಇದೆ ಎಂದರೆ ಸರಿ.

**ಪ್ರತಿವಾದಿ ನಂ. 5 ಮತ್ತು 6 ರವರ ಪರ ವಕೀಲರು, ಕಾಲಾವಕಾಶ ಕೇಳಿದ್ದು, ಕಾಲಾವಕಾಶ ನೀಡಿ ಮುಂದೊಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿ ರುವರು.

ಹಿರಿಯ ಸಿವ್ಹಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.
ಸಿಂದಗಿ